# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

| ಸಂಪುಟ –೧೫೭<br>Volume - 157 | ಬೆಂಗಳೂರು, ಬುಧವಾರ, ೧೬, ಮಾರ್ಚ್, ೨೦೨೨(ಫಾಲ್ಗುಣ, ೨೫, ಶಕವರ್ಷ, ೧೯೪೩)<br>BENGALURU, WEDNESDAY, 16, MARCH, 2022(PHALGUNA, 25, SHAKAVARSHA, 1943) | ಸಂಚಿಕೆ ೫೧<br>Issue 51 |
|---|---|---|


## ಭಾಗ ೪ಎ

**ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು**

## ಕರ್ನಾಟಕ ಸರ್ಕಾರ

**ಸಂಖ್ಯೆ:** ಸಿಐ 275 ಎಂಎಂಎನ್ 2020 (ಭಾಗ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ಮೊದಲನೇ ಮಹಡಿ, ವಿಕಾಸ ಸೌಧ,
ಬೆಂಗಳೂರು, ದಿನಾಂಕ 14.03.2022.

## <u>ಅಧಿಸೂಚನೆ</u>

Karnataka Regulation of Stone Crushers (Amendment) Rules, 2021 ಇದರ ಅಧಿಕೃತ ಕನ್ನಡ ಭಾಷಾಂತರವನ್ನು The Karnataka Official Language Act, 1963 ರ ಪ್ರಕರಣ (2) ರ ಅಡಿಯಲ್ಲಿ ಸಾರ್ವಜನಿಕ ಮಾಹಿತಿಗಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಪತ್ರಿಕೆಯಲ್ಲಿ (ಭಾಗ IV-A) ಪ್ರಕಟಿಸಲು ಆದೇಶಿಸಲಾಗಿದೆ.

**<u>ಅಧಿಸೂಚನೆ ಸಂಖ್ಯೆ: ಸಿಐ 275 ಎಂಎಂಎನ್ 2020 (ಭಾಗ-1), ದಿನಾಂಕ 28.10.2021.</u>**

ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011 (2012ರ ಕರ್ನಾಟಕ ಅಧಿನಿಯಮ 08)ರ 18ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ (ತಿದ್ದುಪಡಿ) ನಿಯಮಗಳು, 2021ರ ನಿಯಮಗಳ ಕರಡನ್ನು ಅಧಿಸೂಚನೆ ಸಂಖ್ಯೆ: ಸಿಐ 275 ಎಂಎಂಎನ್ 2020 (ಭಾಗ-1)ರಲ್ಲಿ, ದಿನಾಂಕ: 09.08.2021ರ ಕರ್ನಾಟಕ ರಾಜ್ಯಪತ್ರದ ಭಾಗ-IV ಎ ರಲ್ಲಿ ಪ್ರಕಟಿಸಲಾಗಿದ್ದು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಇದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿರುವುದರಿಂದ.

ಮತ್ತು, ಸದರಿ ರಾಜ್ಯ ಪತ್ರವನ್ನು 09.08.2021ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.

ಮತ್ತು, ಈ ಬಗ್ಗೆ ಆಕ್ಷೇಪಣೆಗಳು ಮತ್ತು ಸಲಹೆಗಳು ಸ್ವೀಕೃತವಾಗದೇ ಇರುವುದರಿಂದ.

ಪ್ರಸ್ತುತ, ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011 (2012ರ ಕರ್ನಾಟಕ ಅಧಿನಿಯಮ 08) ರ 18ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು, ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) (ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ನಿಯಮ 3ರ ತಿದ್ದುಪಡಿ.-** ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಮಗಳು, 2012ರಲ್ಲಿ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ) ನಿಯಮ 3ರಲ್ಲಿ,-

(i) ಉಪ-ನಿಯಮ (1)ರ ತರುವಾಯ, ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಅರ್ಜಿದಾರನು, ಒಂದು ವೇಳೆ ಲೈಸೆನ್ಸಿನ ಅವಧಿ ಮುಕ್ತಾಯವಾಗುವುದಕ್ಕೆ ಮೂರು ತಿಂಗಳುಗಳ ಮುಂಚಿತವಾಗಿ ನವೀಕರಣ ಅರ್ಜಿಯನ್ನು ಸಲ್ಲಿಸದಿದ್ದರೆ, ಆದರೆ ಅವಧಿ ಮುಕ್ತಾಯವಾಗುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ಅರ್ಜಿಯನ್ನು ಸಲ್ಲಿಸಿದ್ದರೆ, ಸಮುಚಿತ ಕಾರಣದಿಂದಾಗಿ ಮತ್ತು ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಪಾವತಿಸಬೇಕಾದ ಒಂದು ಲಕ್ಷ ರೂಪಾಯಿಗಳ ಹೆಚ್ಚುವರಿ ಶುಲ್ಕವನ್ನು ಪಾವತಿ ಮಾಡಿದ ಮೇಲೆ ಅರ್ಜಿಯನ್ನು ಅಂಗೀಕರಿಸಬಹುದು:

(ii) ಉಪ-ನಿಯಮ (2)ರ ತರುವಾಯ, ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತೂ ಪರಂತು, ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ಅಧಿನಿಯಮ, 2020ರ ಪ್ರಾರಂಭಕ್ಕೂ ಮುಂಚಿತವಾಗಿ ಮಂಜೂರಾದ ಎಲ್ಲಾ ಚಾಲ್ತಿಯಲ್ಲಿರುವ ಕಲ್ಲುಪುಡಿ ಮಾಡುವ ಲೈಸೆನ್ಸ್‌ಗಳನ್ನು ಅವುಗಳ ಮೂಲ ಮಂಜೂರಾತಿಯ ದಿನಾಂಕದಿಂದ ಇಪ್ಪತ್ತು ವರ್ಷಗಳ ಅವಧಿಗಾಗಿ ಮಂಜೂರಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅವುಗಳ ಲೈಸೆನ್ಸ್‌ದಾರನು ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಪಾವತಿಸಬೇಕಾದ ಹತ್ತು ಸಾವಿರ ರೂಪಾಯಿಗಳ ವಾರ್ಷಿಕ ನಿಯಂತ್ರಣ ಶುಲ್ಕವನ್ನು ಪಾವತಿಸತಕ್ಕದ್ದು."

(ii) ಉಪ-ನಿಯಮ (2)ರಲ್ಲಿ ವಿವರಣೆಗಾಗಿ, ಈ ಕೆಳಕಂಡದ್ದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

**"ವಿವರಣೆ:** ಈ ನಿಯಮದ ಉದ್ದೇಶಕ್ಕಾಗಿ, ಸುರಕ್ಷಿತ ವಲಯವೆಂದು ಘೋಷಣೆ ಮಾಡಿದ ತರುವಾಯ ನಿರ್ಮಾಣವಾಗುವ ಯಾವುದೇ ಜನವಸತಿ, ಶಾಲೆ, ದೇವಸ್ಥಾನ ಅಥವಾ ರಸ್ತೆಯಿಂದ ಅಂತಹ ಘೋಷಣೆಯ ಕಾರ್ಯಾಚರಣೆಗೆ ಅಥವಾ ಮುಂದುವರಿಕೆಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ ಮತ್ತು ಲೈಸೆನ್ಸ್‌ನ ಯಾವುದೇ ವಿಸ್ತರಣೆಯನ್ನು ಬಾಧಿಸತಕ್ಕದ್ದಲ್ಲ.

**2. ನಿಯಮ 3ಸಿ ರ ತಿದ್ದುಪಡಿ.-** ಸದರಿ ನಿಯಮಗಳಲ್ಲಿ,-

(i) ಉಪ-ನಿಯಮ (3)ರಲ್ಲಿ, "ಖನಿಜ ವಿಲೇ ಬಿಡುಗಡೆ ಆದೇಶ (ಎಂಡಿಆರ್‌ಒ)" ಎಂಬ ಪದಗಳು ಮತ್ತು ಆವರಣಗಳಿಗೆ ಬದಲಿಯಾಗಿ, "ಖನಿಜ ವಿಲೇ ಪರವಾನಗಿ (ಎಂಡಿಪಿ)" ಎಂಬ ಪದಗಳು ಮತ್ತು ಆವರಣಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ii) ಉಪ-ನಿಯಮ (4)ರಲ್ಲಿ, "ಖನಿಜ ವಿಲೇ ಬಿಡುಗಡೆ ಆದೇಶ (ಎಂಡಿಆರ್‌ಒ)" ಎಂಬ ಪದಗಳು ಮತ್ತು ಆವರಣಗಳಿಗೆ ಬದಲಿಯಾಗಿ, "ಖನಿಜ ವಿಲೇ ಪರವಾನಗಿ (ಎಂಡಿಪಿ)" ಎಂಬ ಪದಗಳು ಮತ್ತು ಆವರಣಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**4. 3ಡಿ ಮತ್ತು 3ಇ ಹೊಸ ನಿಯಮಗಳ ಸೇರ್ಪಡೆ:-** ಸದರಿ ನಿಯಮಗಳ 3ಸಿ ನಿಯಮದ ತರುವಾಯ, ಈ ಕೆಳಕಂಡ ಹೊಸ ನಿಯಮಗಳನ್ನು ಸೇರಿಸತಕ್ಕದ್ದು, ಎಂದರೆ:-

**"3ಡಿ. ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸ್‌ನ ವರ್ಗಾವಣೆ.-** (1) ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸ್ ಅನ್ನು ವರ್ಗಾವಣೆ ಮಾಡುವ ಸಂದರ್ಭದಲ್ಲಿ, ಲೈಸೆನ್ಸ್‌ದಾರನು ಅಧಿನಿಯಮದ (4)ನೇ ಪ್ರಕರಣದ ಖಂಡ(ಎ)ರಲ್ಲಿ ನಿರ್ದಿಷ್ಟಪಡಿಸಿದಂತೆ, ಸಂಸ್ಕರಣಾ ಶುಲ್ಕವಾಗಿ ಇಪ್ಪತ್ತೈದು ಸಾವಿರ ರೂಪಾಯಿಗಳ ಹಿಂದಿರುಗಿಸಲಾಗದ ಅರ್ಜಿ ಶುಲ್ಕದೊಂದಿಗೆ, ಪ್ರಮಾಣ ಪತ್ರ ಮತ್ತು ಭೂಮಾಲೀಕರ ಒಪ್ಪಿಗೆ ಪತ್ರದೊಂದಿಗೆ ಅರ್ಜಿಯನ್ನು **ನಮೂನೆ-ಟಿಎ** ರಲ್ಲಿ ಲೈಸೆನ್ಸಿನ ವರ್ಗಾವಣೆಗಾಗಿ ಲೈಸೆನ್ಸ್ ನೀಡುವ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

(2) ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಲೈಸೆನ್ಸ್ ನೀಡಿಕೆ ಪ್ರಾಧಿಕಾರವು, ಅರ್ಜಿಯನ್ನು ಪರಿಶೀಲಿಸತಕ್ಕದ್ದು ಮತ್ತು ಷರತ್ತುಗಳ ಈಡೇರಿಕೆಯ ನಂತರ, ಲೈಸೆನ್ಸ್ ನೀಡಿಕೆ ಪ್ರಾಧಿಕಾರವು **ನಮೂನೆ-ಎಂಟಿ** ಯಲ್ಲಿ ಅಂಥ ಲೈಸೆನ್ಸ್‌ನ ವರ್ಗಾವಣೆಗಾಗಿ ಸಮ್ಮತಿ ನೀಡಬಹುದು ಮತ್ತು ಅಂಥಹ ಸಮ್ಮತಿಯ ನಂತರ, ನಮೂನೆ-ಎಂಟಿಯಲ್ಲಿ ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸ್‌ನ ವರ್ಗಾವಣೆಯ ಪತ್ರವನ್ನು ವರ್ಗಾವಣೆದಾರನಿಂದ ಮಾಡಿಕೊಳ್ಳತಕ್ಕದ್ದು ಮತ್ತು ಅಂಥ ವರ್ಗಾವಣೆ ಮಾಹಿತಿಯನ್ನು ಲೈಸೆನ್ಸ್ ನೀಡಿಕೆ ಪ್ರಾಧಿಕಾರಕ್ಕೆ ತಿಳಿಸಿದ ದಿನಾಂಕದಿಂದ ಆರು ತಿಂಗಳೊಳಗಾಗಿ ಅಥವಾ ಈ ಬಗ್ಗೆ ಲೈಸೆನ್ಸ್ ನೀಡಿಕೆ ಪ್ರಾಧಿಕಾರವು ವಿಸ್ತರಿಸಬಹುದಾದ ಅಂಥ ಹೆಚ್ಚಿನ ಅವಧಿಯೊಳಗಾಗಿ, ಆದರೆ ಆರು ತಿಂಗಳುಗಳನ್ನು ಮೀರದಂತೆ ಲೈಸೆನ್ಸ್ ಅನ್ನು ವರ್ಗಾಯಿಸತಕ್ಕದ್ದು.

**3ಇ. ಲೈಸೆನ್ಸ್‌ದಾರನ ಮರಣದ ಸಂದರ್ಭದಲ್ಲಿ ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸ್‌ನ ಸ್ಥಿತಿಗತಿ.-** (1) ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸ್ ಚಲಾವಣೆಯ ಅವಧಿಯಲ್ಲಿ ಕಲ್ಲುಪುಡಿ ಮಾಡುವ ಘಟಕದ (ಕ್ರಷರ್‌ಗಳ) ಲೈಸೆನ್ಸ್ ಹೊಂದಿರುವವನು ಮರಣ ಹೊಂದಿದರೆ, ಅಂಥ ಮೃತನ ಕಾನೂನು ಸಮ್ಮತ ವಾರಸುದಾರರು ಅರವತ್ತು ದಿನಗಳ ಅವಧಿಯೊಳಗಾಗಿ ಲೈಸೆನ್ಸ್ ನೀಡುವ ಪ್ರಾಧಿಕಾರಕ್ಕೆ ಆ ಬಗ್ಗೆ ಮಾಹಿತಿಯನ್ನು ತಿಳಿಸತಕ್ಕದ್ದು.

(2) ನಮೂನೆ-ಎಂಎ ರಲ್ಲಿ ಅಂಥಹ ವರ್ಗಾವಣೆಗಾಗಿನ ಅರ್ಜಿಯನ್ನು, ಹತ್ತು ಸಾವಿರ ರೂಪಾಯಿಗಳ ಶುಲ್ಕದೊಂದಿಗೆ, ಹಾಗೂ ಮರಣ ಪ್ರಮಾಣ ಪತ್ರದ ಪ್ರತಿಯೊಂದಿಗೆ, ಕಾನೂನು ಸಮ್ಮತ ವಾರಸುದಾರರ ಪ್ರಮಾಣಪತ್ರ (ಅಫಿಡಾವಿಟ್)ದೊಂದಿಗೆ ಮತ್ತು ತಮ್ಮ ಹಕ್ಕುಗಳನ್ನು

ಬಿಟ್ಟುಕೊಡುವುದಕ್ಕಾಗಿ ಅರ್ಜಿದಾರನ ಪರವಾಗಿರುವ ಇತರೆ ಕಾನೂನು ಸಮ್ಮತ ವಾರಸುದಾರರುಗಳ ಅಫಿಡಾವಿಟ್‌ಗಳು, ಯಾವುದಾದರೂ ಇದ್ದರೆ ಅವುಗಳೊಂದಿಗೆ, ಲೈಸೆನ್ಸ್‌ದಾರನು ಮರಣ ಹೊಂದಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಲೈಸೆನ್ಸ್ ನೀಡಿಕೆ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು. ಅರ್ಜಿದಾರನು ತನ್ನ ಗುರುತಿನ ಪುರಾವೆಯಾಗಿ ಮತ್ತು ವಿಳಾಸದ ಪುರಾವೆಯಾಗಿ ಪಾನ್‌ಕಾರ್ಡ್‌ನ ಮತ್ತು ಆಧಾರ್ ಕಾರ್ಡ್‌ನ ಅಥವಾ ಚುನಾವಣೆಯ ಗುರುತಿನ ಚೀಟಿಯ ಸ್ವಯಂ ದೃಢೀಕರಿಸಿದ-ಭಾವ ಚಿತ್ರದ ಪ್ರತಿಯನ್ನು ಸಹ ಸಲ್ಲಿಸತಕ್ಕದ್ದು.

(3) ವರ್ಗಾವಣೆಗಾಗಿನ ಪ್ರತಿಯೊಂದು ಅರ್ಜಿಯನ್ನು, ಅದನ್ನು ಸ್ವೀಕರಿಸಿದ ಮೂರು ತಿಂಗಳುಗಳ ಅವಧಿಯೊಳಗಾಗಿ ಆದ್ಯತೆ ಮೇಲೆ ಸಕ್ಷಮ ಪ್ರಾಧಿಕಾರವು ಪರಿಶೀಲಿಸತಕ್ಕದ್ದು ಮತ್ತು ವಿಲೇವಾರಿ ಮಾಡತಕ್ಕದ್ದು.

(4) ವರ್ಗಾವಣೆಗಾಗಿ ಸ್ವೀಕರಿಸಿದ ಅರ್ಹ ಅರ್ಜಿಗಳ ಸಂಬಂಧದಲ್ಲಿ, ಮಂಜೂರಾತಿ ಆದೇಶವನ್ನು ನೀಡಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯೊಳಗಾಗಿ ಅಥವಾ ಈ ಬಗ್ಗೆ ಸಕ್ಷಮ ಪ್ರಾಧಿಕಾರವು ವಿಸ್ತರಿಸಬಹುದಾದಂತಹ ಅವಧಿಯೊಳಗಾಗಿ ನಮೂನೆ-ಟಿಯಲ್ಲಿ ವರ್ಗಾವಣೆ ಅನುಮತಿಯನ್ನು ನೀಡತಕ್ಕದ್ದು."

**5. ಹೊಸ ನಮೂನೆಗಳ ಸೇರ್ಪಡೆ:-** ಸದರಿ ನಿಯಮಗಳ ಕೊನೆಯಲ್ಲಿ, ಈ ಕೆಳಕಂಡ ಹೊಸ ನಮೂನೆಗಳನ್ನು ಸೇರಿಸತಕ್ಕದ್ದು, ಎಂದರೆ:-

**"ನಮೂನೆ-ಟಿಎ**
**ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್‌ನ ವರ್ಗಾವಣೆ**
(3ಡಿ ನಿಯಮದ ಉಪ-ನಿಯಮ (1) ನೋಡಿ)

ಗೆ,
ಸದಸ್ಯ ಕಾರ್ಯದರ್ಶಿ
ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್ ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರ
...................... ಜಿಲ್ಲೆ.
ನಾನು/ನಾವು ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್‌ನ ವರ್ಗಾವಣೆಯನ್ನು ಕೋರುತ್ತೇನೆ/ವೆ.

| **ಕ್ರಮ ಸಂಖ್ಯೆ** | **ಬಾಬು ವಿವರಣೆ** | **ವಿವರಗಳು** |
|---|---|---|
| 1. | ವರ್ಗಾವಣೆಗಾರ/ಲೈಸೆನ್ಸ್‌ದಾರನ ಹೆಸರು | |
| 2. | ವರ್ಗಾವಣೆಗಾರ/ಲೈಸೆನ್ಸ್‌ದಾರನ ವಿಳಾಸ | |
| 3. | ವರ್ಗಾಯಿತನ ಹೆಸರು | |
| 4. | ವರ್ಗಾಯಿತನ ವಿಳಾಸ | |
| 5. | ಲೈಸೆನ್ಸ್ ನೀಡಿಕೆಯ ದಿನಾಂಕ (ನಮೂನೆ-ಸಿ) | |

| | | |
|---|---|---|
| 6. | ಲೈಸೆನ್ಸ್ ಸಂಖ್ಯೆ | |
| 7. | ಪ್ರದೇಶ, ಎಕರೆಗಳಲ್ಲಿ | |
| 8. | ಗ್ರಾಮ ಮತ್ತು ತಾಲ್ಲೂಕ್‌ನ ಹೆಸರು | |
| 9. | ವರ್ಗಾಯಿತನು, ವರ್ಗಾವಣೆಗಾರನ ಅಂಥಹ ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸಿಗೆ ಒಳಪಟ್ಟು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಎಲ್ಲಾ ಷರತ್ತುಗಳು ಮತ್ತು ಹೊಣೆಗಾರಿಕೆಗಳನ್ನು ಒಪ್ಪಿಕೊಂಡು ಪ್ರಮಾಣಪತ್ರವನ್ನು (ಅಫಿಡಾವಿಟ್‌ನ್ನು) ಸಲ್ಲಿಸತಕ್ಕದ್ದು. | |
| 10. | ವರ್ಗಾಯಿತನು ಇತ್ತೀಚಿಗೆ ಸಲ್ಲಿಸಿದ ಆದಾಯ ತೆರಿಗೆ ವಿವರಗಳನ್ನು ಸಲ್ಲಿಸತಕ್ಕದ್ದು. | |
| 11. | ಸುರಕ್ಷಿತ ವಲಯವು ಖಾಸಗಿ ಅಥವಾ ಪಟ್ಟಾ ಭೂಮಿಯಲ್ಲಿದ್ದರೆ ವರ್ಗಾಯಿತನು ಭೂಮಾಲೀಕನ ಸಮ್ಮತಿ ಪತ್ರವನ್ನು ಒದಗಿಸತಕ್ಕದ್ದು. | |
| 12. | ವರ್ಗಾವಣೆಗೆ ಸಂಬಂಧಿಸಿದಂತೆ ವರ್ಗಾವಣೆಗಾರನು ಸರ್ಕಾರಕ್ಕೆ ಮಾಡಬೇಕಾಗಿರುವ ಪಾವತಿಯ ವಿವರಗಳು<br>(ಮೊತ್ತ ರೂಪಾಯಿಗಳಲ್ಲಿ ............)<br>(ಡಿ.ಡಿ. ಸಂಖ್ಯೆ ಮತ್ತು ಮೊತ್ತದ ವಿವರಗಳು ............) | |

ಈ ಮೇಲೆ ಒದಗಿಸಿದ ವಿವರಗಳು ಸರಿಯಾಗಿವೆ ಮತ್ತು ನಿಮಗೆ ಅಗತ್ಯವಿರಬಹುದಾದ ಯಾವುದೇ ಇತರ ವಿವರಗಳನ್ನು ಒದಗಿಸಲು ಸಿದ್ಧರಿದ್ದೇವೆ ಎಂದು ನಾವು ಈ ಮೂಲಕ ಘೋಷಿಸುತ್ತೇವೆ.

ವರ್ಗಾಯಿತನು ಮತ್ತು ವರ್ಗಾವಣೆಗಾರನು ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್‌ನ ವರ್ಗಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011ರ ಉಪಬಂಧಗಳನ್ನು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳನ್ನು ಪಾಲಿಸುವುದಕ್ಕೆ ವಚನ ಬದ್ಧರಾಗಿರುತ್ತೇವೆ.

ದಿನಾಂಕ:

ಸ್ಥಳ:

ತಮ್ಮ ವಿಶ್ವಾಸಿ,

ವರ್ಗಾವಣೆಗಾರ

.................

ವರ್ಗಾಯಿತ

.................

**ಅರ್ಜಿದಾರರುಗಳಿಗೆ ಸೂಚನೆಗಳು:**

(ಎ) ಅರ್ಜಿದಾರನು ಒಂದು ಕಂಪನಿ, ಪಾಲುದಾರಿಕೆ ಸಂಸ್ಥೆ, ವ್ಯಕ್ತಿಗಳ ಸಂಘ ಅಥವಾ ಪರಿಮಿತ ಹೊಣೆಗಾರಿಕೆಯ ಪಾಲುದಾರಿಕೆಯ ಸಂಸ್ಥೆಗಳಾಗಿರುವ ಸಂದರ್ಭದಲ್ಲಿ, ಅರ್ಜಿದಾರರುಗಳು ಯುಕ್ತವಾಗಿ ಅಧಿಕೃತಗೊಳಿಸಿದ ಪ್ರತಿನಿಧಿಯು ಅರ್ಜಿಗೆ ಸಹಿ ಮಾಡತಕ್ಕದ್ದು. ಅರ್ಜಿದಾರನು ಒಬ್ಬ ವ್ಯಕ್ತಿಯಾಗಿದ್ದರೆ, ಅರ್ಜಿದಾರನು ಅರ್ಜಿಗೆ ವೈಯಕ್ತಿಕವಾಗಿ ಸಹಿ ಮಾಡತಕ್ಕದ್ದು.

(ಬಿ) ಅರ್ಜಿದಾರನು (ಒಂದು ಕಂಪನಿಯಾಗಿದ್ದಲ್ಲಿ), ಅರ್ಜಿದಾರನ ಅಧಿಕೃತ ಸಹಿಯ ಕಾರ್ಪೊರೇಟ್ ಪ್ರಮಾಣೀಕರಣವನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು. ಅಂಥಹ ಕಾರ್ಪೊರೇಟ್ ಪ್ರಮಾಣೀಕರಣದಲ್ಲಿನ ಯಾವುದೇ ಬದಲಾವಣೆಯನ್ನು ಕೂಡಲೇ ಸರ್ಕಾರಕ್ಕೆ ತಿಳಿಸತಕ್ಕದ್ದು.

(ಸಿ) ಅರ್ಜಿದಾರನ ಅಧಿಕೃತ ಸಹಿದಾರನ ಗುರುತಿನ ಮತ್ತು ವಿಳಾಸದ ಪುರಾವೆಯ ಸ್ವಯಂ ದೃಢೀಕೃತ ಪ್ರತಿಯನ್ನು ಅರ್ಜಿಯ ಜೊತೆಗೆ ಲಗತ್ತಿಸತಕ್ಕದ್ದು.

(ಡಿ) ಈ ನಿಯಮಗಳ ಉಪಬಂಧಗಳಿಗನುಸಾರವಾಗಿ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್ ಹೊಂದುವುದಕ್ಕೆ ವರ್ಗಾಯಿತನ ಅರ್ಹತೆಯನ್ನು ಸ್ಥಿರೀಕರಿಸುವುದಕ್ಕಾಗಿ ದಸ್ತಾವೇಜೀಯ ಸಾಕ್ಷ್ಯವನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

## ನಮೂನೆ-ಟಿ

## ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸ್‌ನ ಹಕ್ಕು ಬದಲಾವಣೆಯ ಪತ್ರ

(3ಇ ನಿಯಮದ (4)ನೇ ಉಪ-ನಿಯಮವನ್ನು ನೋಡಿ)

ಈ ಕರಾರುನಾಮೆಯನ್ನು, 20.........ನೇ ವರ್ಷದ ............ ದಿನದಂದು ಕರ್ನಾಟಕದ ರಾಜ್ಯಪಾಲರು (ಇದರಲ್ಲಿ ಇನ್ನುಮುಂದೆ ಸರ್ಕಾರ ಎಂಬುದಾಗಿ ಉಲ್ಲೇಖಿಸಲಾದಂತಹ ಪದಾವಳಿಗಳು, ಸಂದರ್ಭವು ಹಾಗೆಂದು ಅವಕಾಶ ನೀಡಿರುವ ಸಂದರ್ಭದಲ್ಲಿ, ಒಂದು ಭಾಗದ ಅವರ ಉತ್ತರಾಧಿಕಾರಿಯನ್ನು ಒಳಗೊಳ್ಳತಕ್ಕದ್ದು) ಮತ್ತು ............ (ವಿಳಾಸ ಮತ್ತು ವೃತ್ತಿಯೊಂದಿಗೆ ವ್ಯಕ್ತಿ/ವ್ಯಕ್ತಿಗಳ ಹೆಸರು) (ಇದರಲ್ಲಿ ಇನ್ನು ಮುಂದೆ "ಕಾನೂನು ಸಮ್ಮತ ವಾರಸುದಾರರು" ಎಂಬುದಾಗಿ ಉಲ್ಲೇಖಿಸಿರುವ ಪದಾವಳಿಗಳು, ಸಂದರ್ಭವು ಹಾಗೆಂದು ಅವಕಾಶ ನೀಡಿರುವ ಸಂದರ್ಭದಲ್ಲಿ, ಆತನ ವಾರಸುದಾರರು, ಕಾರ್ಯನಿರ್ವಾಹಕರು, ಆಡಳಿತಗಾರರು, ಪ್ರತಿನಿಧಿಗಳು ಮತ್ತು ಅನುಮತಿಸಲಾದ ಹಸ್ತಾಂತರಕಾರ ಇವರುಗಳನ್ನು ಎರಡನೆ ಭಾಗವಾಗಿ ಒಳಗೊಂಡಿದೆ ಎಂಬುದಾಗಿ ಭಾವಿಸತಕ್ಕ) ಇವರ ನಡುವೆ ಮಾಡಿಕೊಳ್ಳಲಾಗಿದೆ.

_____ಕ್ರಮಸಂಖ್ಯೆಯ _____ಗ್ರಾಮದಲ್ಲಿರುವ _____ತಾಲ್ಲೂಕಿನ_____ ವಿಸ್ತೀರ್ಣದ (ವಿಸ್ತೀರ್ಣ, ಎಕರೆಗಳಲ್ಲಿ) _____(ದಿನಾಂಕ) ದಿಂದ ಜಾರಿಯಲ್ಲಿರುವ_____ಸಂಖ್ಯೆಯ ಲೈಸೆನ್ಸನ್ನು _____ಹೆಸರಿನ (ಮೃತನ ಹೆಸರು) ಕಲ್ಲುಪುಡಿ ಘಟಕಕ್ಕೆ ವಾರ್ಷಿಕ ನಿಯಂತ್ರಣ ಶುಲ್ಕಗಳ ಪಾವತಿ ಮತ್ತು/ಅಥವಾ ಇತರ ಶುಲ್ಕಗಳ ಪಾವತಿಗೆ ಒಳಪಟ್ಟು, ಮತ್ತು ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್‌ದಾರನ ಒಡಂಬಡಿಕೆಯ ಪಾಲನೆ ಮತ್ತು ಕಾರ್ಯಸಾಧನೆ ಮತ್ತು ಮೀಸಲಿರಿಸಲಾದ ಸದರಿ ಒಪ್ಪಂದ/ಪತ್ರ/ಲೈಸೆನ್ಸಿನಲ್ಲಿನ ಷರತ್ತುಗಳು ಮತ್ತು ಹಸ್ತಾಂತರಿತವಲ್ಲದ ಒಡಂಬಡಿಕೆಯನ್ನು ಅಂತರ್ಗತಗೊಳಿಸಿ ಒಳಗೊಂಡಿರುವ ಅಥವಾ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೆ ಅದರ ಮೇರೆಗಿನ ಯಾವುದೇ ಹಿತಾಸಕ್ತಿಯನ್ನು ಹಸ್ತಾಂತರಿಸದೆ ಕರಾರನ್ನು ಮಾಡಿಕೊಂಡಿರುವುದರಿಂದ;

ಮತ್ತು ಪ್ರಸ್ತುತ ಕಾನೂನು ಸಮ್ಮತ ವಾರಸುದಾರ/ವಾರಸುದಾರರು ಲೈಸೆನ್ಸಿನ ಹಕ್ಕು ಬದಲಾವಣೆಯನ್ನು ಬಯಸಿರುವುದರಿಂದ ಮತ್ತು ಸರ್ಕಾರವು ಕಾನೂನು ಸಮ್ಮತ ವಾರಸುದಾರ/ವಾರಸುದಾರರುಗಳ ಕೋರಿಕೆಯ ಮೇರೆಗೆ ಹಕ್ಕು ಬದಲಾವಣೆಗೆ ಆದೇಶ ಸಂಖ್ಯೆ , ದಿನಾಂಕ ರ ಮೂಲಕ ಅನುಮತಿಯನ್ನು ನೀಡಿದೆ ಮತ್ತು ಅಂಥ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್‌ನ ಹಕ್ಕು ಬದಲಾವಣೆ ಮತ್ತು ಹಸ್ತಾಂತರಣವು ವರ್ಗಾಯಿತನು ಮಾಡಿಕೊಂಡಿರುವ ಒಪ್ಪಂದಗಳ ಷರತ್ತುಗಳ ಮೇಲೆ ಅವಲಂಬಿತವಾಗಿದ್ದು, ಈ ಕೆಳಗೆ ನಮೂದಿಸಲಾದ ನಿಬಂಧನೆಗಳು ಮತ್ತು ಷರತ್ತುಗಳನ್ನು ಒಳಗೊಂಡಿರುತ್ತದೆ.

ಪ್ರಸ್ತುತ, ಈ ಸಾಕ್ಷಿ ಪತ್ರವು ಈ ಕೆಳಕಂಡಂತೆ ಇರುತ್ತದೆ:-

1. ಕಾನೂನು ಸಮ್ಮತ ವಾರಸುದಾರ/ಗಳು ಸರ್ಕಾರದೊಂದಿಗೆ ಈ ಮೂಲಕ ಒಪ್ಪಂದ ಮಾಡಿಕೊಳ್ಳುವುದೇನೆಂದರೆ: ಕಾನೂನು ಸಮ್ಮತ ವಾರಸುದಾರನ/ರರ ಲೈಸೆನ್ಸ್‌ನ ಹಕ್ಕು ಬದಲಾವಣೆ ಮತ್ತು ಹಸ್ತಾಂತರಣದಿಂದ ಮತ್ತು ತರುವಾಯ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸನ್ನು ಕಾನೂನು ಸಮ್ಮತ ವಾರಸುದಾರನಿಗೆ/ರಿಗೆ ಕೊಡಲಾಗಿದ್ದರೆ ಹೇಗೋ ಹಾಗೆ, ಮತ್ತು ಆತನು ಅದನ್ನು ಮೂಲತಃವಾಗಿ ಜಾರಿಗೊಳಿಸಿದ್ದರೆ ಹೇಗೋ ಹಾಗೆ, ಎಲ್ಲ ವಿಧದಲ್ಲಿಯೂ, ಮತ್ತು ಅದೇ ವಿಧಾನದಲ್ಲಿ ಇದರಿಂದ ಉದ್ಭವಿಸುವ ಎಲ್ಲಾ ವಿಧದ ಎಲ್ಲ ಬಡ್ಡಿಗಳು, ನಷ್ಟಗಳು, ಹಾನಿಗಳು, ದಂಡನೆ, ಕಾನೂನು ಕ್ರಮ, ಬೇಡಿಕೆ ಮತ್ತು ವೆಚ್ಚದೊಂದಿಗೆ, ಇದರಲ್ಲಿ ಈ ಹಿಂದೆ ಹೇಳಲಾದ ಕಲ್ಲುಪುಡಿ ಮಾಡುವ ಘಟಕದ ಸದರಿ ಲೈಸೆನ್ಸ್‌ನಲ್ಲಿ ಅಡಕವಾದ ಒಪ್ಪಂದಗಳು, ನಿಬಂಧನೆಗಳು ಮತ್ತು ಷರತ್ತುಗಳ ಎಲ್ಲ ಉಪಬಂಧಗಳಿಗೆ ಒಳಪಟ್ಟಿರತಕ್ಕದ್ದು. ಮತ್ತು ಅವುಗಳಿಗೆ ಅವರು ಬದ್ಧರಾಗಿರತಕ್ಕದ್ದು, ಮತ್ತು ಅವುಗಳನ್ನು ಪಾಲಿಸಲು, ಪರಿವೀಕ್ಷಿಸಲು ಮತ್ತು ಸ್ಥಿರೀಕರಿಸಲು ಹೊಣೆಗಾರರಾಗಿರತಕ್ಕದ್ದು.

2. ಯಾವುದೇ ಸ್ವಾಯತ್ತ ನಿಕಾಯ ಅಥವಾ ಸರ್ಕಾರಿ ಉದ್ಯಮಗಳು ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವುದೇ ಇಲಾಖೆಯಿಂದ ಕಲ್ಲುಪುಡಿ ಮಾಡುವ ಘಟಕದ ಕಾರ್ಯಾಚರಣೆಗಾಗಿ ಮೃತನು ಪಡೆದುಕೊಂಡ ಸಮ್ಮತಿಯನ್ನು, ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸ್‌ನ ಹಕ್ಕು ಬದಲಾವಣೆಯ ತರುವಾಯ ಮೃತನ ಕಾನೂನು ಸಮ್ಮತ ವಾರಸುದಾರ/ರರು ಪಡೆದುಕೊಂಡಿರುವುದಾಗಿ ಭಾವಿಸತಕ್ಕದ್ದು.

**ಅನುಸೂಚಿ**

______ ಜಮೀನು ಸರ್ವೆ ಸಂಖ್ಯೆಯನ್ನು ಹೊಂದಿರುವ ______ ಎಕರೆ ವಿಸ್ತೀರ್ಣದ ಮತ್ತು ______ ಗ್ರಾಮದ ______ ತಾಲ್ಲೂಕಿನ ______ ಜಿಲ್ಲೆಯಲ್ಲಿ ಇರುವ ನಕ್ಷೆಯಲ್ಲಿ ಅದರ ಬಗ್ಗೆ ನಕ್ಷೆ ಚಿತ್ರಣ ರಚಿಸಿದ ಜಮೀನುಗಳ ಎಲ್ಲ ಭೂಭಾಗಗಳನ್ನು ಇದಕ್ಕೆ ಅನುಬಂಧಿಸಲಾಗಿದೆ.

ಮತ್ತು ಅದರ ಮೇಲೆ ______ ಬಣ್ಣದಿಂದ ಗುರುತು ಮಾಡಲಾಗಿದೆ ಹಾಗೂ ಈ ಕೆಳಗಿನ ನಿರ್ದೇಶಾಂಕಗಳೊಂದಿಗೆ ಈ ಕೆಳಕಂಡಂತೆ ಸರಹದ್ದುಗಳನ್ನು ಒಳಗೊಂಡಿದೆ.

ಉತ್ತರಕ್ಕೆ: ಸರ್ವೆ ಸಂಖ್ಯೆಯ ಭಾಗ.

ದಕ್ಷಿಣಕ್ಕೆ: ಸರ್ವೆ ಸಂಖ್ಯೆಯ ಭಾಗ.

ದಕ್ಷಿಣಕ್ಕೆ: ಸರ್ವೆ ಸಂಖ್ಯೆಯ ಭಾಗ.

ದಕ್ಷಿಣಕ್ಕೆ: ಸರ್ವೆ ಸಂಖ್ಯೆಯ ಭಾಗ.

**ನಿರ್ದೇಶಾಂಕಗಳು**

| ಬಿಂದುಗಳು | ರೇಖಾಂಶ | ಅಕ್ಷಾಂಶ |
|---|---|---|
| | | |
| | | |
| | | |
| | | |

ಸಹಿ
ರಾಜ್ಯ ಸರ್ಕಾರಕ್ಕಾಗಿ ಮತ್ತು ಅದರ ಪರವಾಗಿ.
ಕಾನೂನು ಸಮ್ಮತ ಪ್ರತಿನಿಧಿಯ ಸಮ್ಮುಖದಲ್ಲಿ
(____________________)____________
ಸಾಕ್ಷಿಗಳು
1.
2.

**ನಮೂನೆ-ಎಂಎ**
**ಹಕ್ಕು ಬದಲಾವಣೆ ಅರ್ಜಿ**
(3ಇ ನಿಯಮದ (2)ನೇ ಉಪ-ನಿಯಮವನ್ನು ನೋಡಿ)

ಗೆ,
ಸದಸ್ಯ ಕಾರ್ಯದರ್ಶಿ
ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್ ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರ
........................ ಜಿಲ್ಲೆ.
ನಾನು/ನಾವು ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್‌ನ ವರ್ಗಾವಣೆಯನ್ನು ಕೋರುತ್ತೇನೆ/ವೆ.

| **ಕ್ರಮ ಸಂಖ್ಯೆ** | **ಬಾಬ್ತು ವಿವರಣೆ** | **ವಿವರಗಳು** |
|---|---|---|
| 1. | ಲೈಸೆನ್ಸುದಾರನ ಹೆಸರು | |
| 2. | ಲೈಸೆನ್ಸುದಾರನ ವಿಳಾಸ | |
| 3. | ಲೈಸೆನ್ಸುದಾರನ ಮರಣದ ದಿನಾಂಕ | |
| 4. | ಕಾನೂನು ಸಮ್ಮತ ಪ್ರತಿನಿಧಿಯ ವಿಳಾಸ | |
| 5. | ಲೈಸೆನ್ಸ್ ನೀಡಿಕೆಯ ದಿನಾಂಕ (ನಮೂನೆ-ಸಿ) | |
| 6. | ಲೈಸೆನ್ಸ್ ಸಂಖ್ಯೆ | |
| 7. | ಪ್ರದೇಶ, ಎಕರೆಗಳಲ್ಲಿ | |
| 8. | ಗ್ರಾಮ ಮತ್ತು ತಾಲ್ಲೂಕಿನ ಹೆಸರು | |
| 9. | ಮೃತ ಲೈಸೆನ್ಸ್‌ದಾರನ ಮರಣ ಪ್ರಮಾಣಪತ್ರ | |

| | | |
|---|---|---|
| 10. | ಕಾನೂನು ಸಮ್ಮತ ಪ್ರತಿನಿಧಿಯು, ಕುಟುಂಬದ ಇತರೆ ಜೀವಂತ ಸದಸ್ಯರುಗಳ ಸಮ್ಮತಿಯನ್ನು ಸಲ್ಲಿಸತಕ್ಕದ್ದು. | |
| 11. | ಕಾನೂನು ಸಮ್ಮತ ಪ್ರತಿನಿಧಿಯು, ವರ್ಗಾವಣೆಗಾರನ ಅಂಥ ಕಲ್ಲುಪುಡಿ ಮಾಡುವ ಲೈಸೆನ್ಸ್‌ಗೆ ಒಳಪಟ್ಟು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗಿನ ಎಲ್ಲ ಷರತ್ತುಗಳನ್ನು ಮತ್ತು ಹೊಣೆಗಾರಿಕೆಗಳನ್ನು ಒಪ್ಪಿಕೊಂಡು ಪ್ರಮಾಣಪತ್ರ ಸಲ್ಲಿಸತಕ್ಕದ್ದು. | |
| 12. | ವರ್ಗಾಯಿತನು, ಸಲ್ಲಿಸಿದ ಇತ್ತೀಚಿನ ಆದಾಯ ತೆರಿಗೆ ವಿವರಪಟ್ಟಿಕೆಗಳ ವಿವರಗಳನ್ನು ಸಲ್ಲಿಸತಕ್ಕದ್ದು. | |
| 13. | ವರ್ಗಾವಣೆಗಾರನು ವರ್ಗಾವಣೆ ಸಂಬಂಧ ಸರ್ಕಾರಕ್ಕೆ ಮಾಡಬೇಕಾದ ಪಾವತಿಯ ವಿವರಗಳು (ಮೊಬಲಗು ರೂಪಾಯಿಗಳಲ್ಲಿ) (ಡಿಡಿ ಸಂಖ್ಯೆ ಮತ್ತು ಮೊಬಲಗಿನ ವಿವರಗಳು) | |

ನಾವು, ಮೇಲೆ ಒದಗಿಸಲಾದ ವಿವರಗಳು ಸರಿಯಾಗಿವೆ ಎಂದು ಮತ್ತು ನಾನು/ನಾವು ನಿಮಗೆ ಅಗತ್ಯವಿರಬಹುದಾದ ಯಾವುದೇ ಇತರೆ ವಿವರಗಳನ್ನು ಒದಗಿಸಲು ಸಿದ್ಧನಿದ್ದೇನೆ/ವೆ ಎಂದು ಈ ಮೂಲಕ ಘೋಷಿಸುತ್ತೇವೆ.

ವರ್ಗಾಯಿತನು ಕಲ್ಲುಪುಡಿ ಮಾಡುವ ಲೈಸೆನ್ಸ್‌ನ್ನು ವರ್ಗಾಯಿಸುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011ರ ಉಪಬಂಧಗಳನ್ನು ಮತ್ತು ಅದರಡಿಯಲ್ಲಿ ರಚಿಸಿದ ನಿಯಮಗಳನ್ನು ಪಾಲಿಸಲು ವಚನಬದ್ಧನಾಗಿರತಕ್ಕದ್ದು.

ದಿನಾಂಕ:

ಸ್ಥಳ:

ತಮ್ಮ ವಿಶ್ವಾಸಿ,

ಕಾನೂನು ಸಮ್ಮತ ಪ್ರತಿನಿಧಿ

**ಅರ್ಜಿದಾರರಿಗೆ ಸೂಚನೆಗಳು:**

(ಎ) ಅರ್ಜಿದಾರನು ಒಂದು ಕಂಪನಿ, ಪಾಲುಗಾರಿಕೆಯ ಸಂಸ್ಥೆ, ವ್ಯಕ್ತಿಗಳ ಸಂಘ ಅಥವಾ ಸೀಮಿತ ಹೊಣೆಗಾರಿಕೆ ಪಾಲುಗಾರಿಕೆಯ ಸಂಸ್ಥೆಯಾಗಿದ್ದ ಸಂದರ್ಭದಲ್ಲಿ, ಅರ್ಜಿದಾರನ ಯುಕ್ತ ಅಧಿಕೃತ ಪ್ರತಿನಿಧಿಯು ಅರ್ಜಿಗೆ ಸಹಿ ಹಾಕತಕ್ಕದ್ದು. ಅರ್ಜಿದಾರನು, ಒಬ್ಬ ವ್ಯಕ್ತಿಯಾಗಿದ್ದ ಸಂದರ್ಭದಲ್ಲಿ, ಅರ್ಜಿದಾರನು ತಾನೇ ಖುದ್ದಾಗಿ ಅರ್ಜಿಗೆ ಸಹಿ ಹಾಕತಕ್ಕದ್ದು.

(ಬಿ) ಅರ್ಜಿದಾರನು (ಒಂದು ಕಂಪನಿಯಾಗಿದ್ದಲ್ಲಿ) ಅರ್ಜಿದಾರನ ಅಧಿಕೃತ ಸಹಿ ಹಾಕುವವರ ಕಾರ್ಪೊರೇಟ್ ಪ್ರಮಾಣೀಕರಣವನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು. ಅಂಥ ಕಾರ್ಪೊರೇಟ್ ಪ್ರಮಾಣೀಕರಣದಲ್ಲಿ ಆಗುವ ಯಾವುದೇ ಬದಲಾವಣೆಯನ್ನು ಕೂಡಲೇ ಸರ್ಕಾರಕ್ಕೆ ತಿಳಿಸತಕ್ಕದ್ದು.

(ಸಿ) ಅರ್ಜಿದಾರನ ಅಧಿಕೃತ ಸಹಿ ಹಾಕುವವರ ಗುರುತಿನ ಮತ್ತು ವಿಳಾಸದ ಪುರಾವೆಯ ಸ್ವಯಂ ದೃಢೀಕೃತ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

# ನಮೂನೆ-ಎಂಟಿ
## ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸ್‌ನ ವರ್ಗಾವಣೆಗಾಗಿ ಪತ್ರ

(3ಡಿ ನಿಯಮದ (2)ನೇ ಉಪ-ನಿಯಮವನ್ನು ನೋಡಿ)

ಈ ಕರಾರುನಾಮೆಯನ್ನು, 20.........ನೇ ವರ್ಷದ ........... ದಿನದಂದು ಕರ್ನಾಟಕ ರಾಜ್ಯಪಾಲರು (ಇದರಲ್ಲಿ ಇನ್ನುಮುಂದೆ ಸರ್ಕಾರ ಎಂಬುದಾಗಿ ಉಲ್ಲೇಖಿಸಲಾದಂತಹ ಪದಾವಳಿಗಳು, ಸಂದರ್ಭವು ಹಾಗೆಂದು ಅವಕಾಶ ನೀಡಿರುವ ಸಂದರ್ಭದಲ್ಲಿ, ಒಂದು ಭಾಗವಾಗಿ ಅವರ ಉತ್ತರಾಧಿಕಾರಿಯನ್ನು ಒಳಗೊಳ್ಳತಕ್ಕದ್ದು) ಮತ್ತು ........... (ವಿಳಾಸ ಮತ್ತು ವೃತ್ತಿಯೊಂದಿಗೆ ವ್ಯಕ್ತಿ/ವ್ಯಕ್ತಿಗಳ ಹೆಸರು) (ಇದರಲ್ಲಿ ಇನ್ನು ಮುಂದೆ ವರ್ಗಾವಣೆಗಾರ/ರರು ಎಂಬುದಾಗಿ ಉಲ್ಲೇಖಿಸಿರುವ ಪದಾವಳಿಗಳು, ಸಂದರ್ಭವು ಹಾಗೆಂದು ಅವಕಾಶ ನೀಡಿರುವ ಸಂದರ್ಭದಲ್ಲಿ, ಆತನ ವಾರಸುದಾರರು, ಕಾರ್ಯನಿರ್ವಾಹಕರು, ಆಡಳಿತಗಾರರು, ಪ್ರತಿನಿಧಿಗಳು ಮತ್ತು ಅನುಮತಿಸಲಾದ ಹಸ್ತಾಂತರಕಾರ ಇವರನ್ನು ಎರಡನೆ ಭಾಗವಾಗಿ ಒಳಗೊಂಡಿದೆ ಎಂಬುದಾಗಿ ಭಾವಿಸತಕ್ಕ) ಇವರ ನಡುವೆ ಮಾಡಿಕೊಳ್ಳಲಾಗಿದೆ.

____ಕ್ರಮಸಂಖ್ಯೆಯ_____ಗ್ರಾಮದಲ್ಲಿರುವ ____ತಾಲ್ಲೂಕಿನ ___ವಿಸ್ತೀರ್ಣದ (ವಿಸ್ತೀರ್ಣ, ಎಕರೆಗಳಲ್ಲಿ) (ದಿನಾಂಕ) ದಿಂದ ಜಾರಿಯಲ್ಲಿರುವ ಸಂಖ್ಯೆಯ ಲೈಸೆನ್ಸನ್ನು ಹೆಸರಿನ (ವರ್ಗಾವಣೆಗಾರನ ಹೆಸರು) ಕಲ್ಲುಪುಡಿ ಘಟಕಕ್ಕೆ ವಾರ್ಷಿಕ ನಿಯಂತ್ರಣ ಶುಲ್ಕಗಳ ಪಾವತಿ ಮತ್ತು/ಅಥವಾ ಇತರ ಶುಲ್ಕಗಳ ಪಾವತಿಗೆ ಒಳಪಟ್ಟು ಮತ್ತು ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್‌ದಾರನ ಒಡಂಬಡಿಕೆಯ ಪಾಲನೆ ಮತ್ತು ಕಾರ್ಯಸಾಧನೆ ಮತ್ತು ಮೀಸಲಿರಿಸಲಾದ ಸದರಿ ಒಪ್ಪಂದ/ಪತ್ರ/ಲೈಸೆನ್ಸಿನಲ್ಲಿನ ಷರತ್ತುಗಳು ಮತ್ತು ಹಸ್ತಾಂತರಿತವಲ್ಲದ ಒಡಂಬಡಿಕೆಯನ್ನು ಅಂತರ್ಗತಗೊಳಿಸಿ ಒಳಗೊಂಡಿರುವ ಅಥವಾ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೆ ಅದರ ಮೇರೆಗಿನ ಯಾವುದೇ ಹಿತಾಸಕ್ತಿಯನ್ನು ಹಸ್ತಾಂತರಿಸದೆ ಕರಾರನ್ನು ಮಾಡಿಕೊಂಡಿರುವುದರಿಂದ;

ಮತ್ತು ಪ್ರಸ್ತುತ ವರ್ಗಾಯಿತನು ಲೈಸೆನ್ಸಿನ ವರ್ಗಾವಣೆಯನ್ನು ಬಯಸಿರುವುದರಿಂದ ಮತ್ತು ಸರ್ಕಾರವು ವರ್ಗಾಯಿತನ/ಗಳ ಕೋರಿಕೆಯ ಮೇರೆಗೆ ವರ್ಗಾವಣೆಗೆ ಆದೇಶ ಸಂಖ್ಯೆ ___, ದಿನಾಂಕ ರ ಮೂಲಕ ಅನುಮತಿಯನ್ನು ನೀಡಿದೆ ಮತ್ತು ಅಂಥ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್‌ನ ವರ್ಗಾವಣೆಯು ಮತ್ತು ಹಸ್ತಾಂತರಣವು, ವರ್ಗಾಯಿತನು ಮಾಡಿಕೊಂಡಿರುವ ಒಪ್ಪಂದಗಳ ಷರತ್ತುಗಳ ಮೇಲೆ ಅವಲಂಬಿತವಾಗಿದ್ದು, ಈ ಕೆಳಗೆ ನಮೂದಿಸಲಾದ ನಿಬಂಧನೆಗಳು ಮತ್ತು ಷರತ್ತುಗಳನ್ನು ಒಳಗೊಂಡಿರುತ್ತದೆ.

ಪ್ರಸ್ತುತ, ಈ ಸಾಕ್ಷಿ ಪತ್ರವು ಈ ಕೆಳಕಂಡಂತೆ ಇರುತ್ತದೆ:-

1. ವರ್ಗಾಯಿತನು/ಗಳು ಸರ್ಕಾರದೊಂದಿಗೆ ಈ ಮೂಲಕ ಒಪ್ಪಂದ ಮಾಡಿಕೊಳ್ಳುವುದೇನೆಂದರೆ: ವರ್ಗಾಯಿತನ/ಗಳ ಲೈಸೆನ್ಸ್‌ನ ವರ್ಗಾವಣೆ ಮತ್ತು ಹಸ್ತಾಂತರಣದಿಂದ ಮತ್ತು ತರುವಾಯ, ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸನ್ನು ವರ್ಗಾಯಿತನಿಗೆ/ಗಳಿಗೆ ಕೊಡಲಾಗಿದ್ದರೆ ಹೇಗೋ ಹಾಗೆ, ಮತ್ತು ಆತನು ಅದನ್ನು ಮೂಲತಃವಾಗಿ ಜಾರಿಗೊಳಿಸಿದ್ದರೆ ಹೇಗೋ ಹಾಗೆ ಎಲ್ಲ ವಿಧದಲ್ಲಿಯೂ, ಮತ್ತು ಅದೇ ವಿಧಾನದಲ್ಲಿ ಇದರಿಂದ ಉದ್ಭವಿಸುವ ಎಲ್ಲಾ ವಿಧದ ಎಲ್ಲ ಬಡ್ಡಿಗಳು, ನಷ್ಟಗಳು, ಹಾನಿಗಳು, ದಂಡನೆ, ಕಾನೂನು ಕ್ರಮ, ಬೇಡಿಕೆ ಮತ್ತು ವೆಚ್ಚದೊಂದಿಗೆ, ಇದರಲ್ಲಿ ಈ ಹಿಂದೆ ಹೇಳಲಾದ ಕಲ್ಲುಪುಡಿ ಮಾಡುವ ಘಟಕದ ಸದರಿ ಲೈಸೆನ್ಸ್‌ನಲ್ಲಿ ಅಡಕವಾದ ಒಪ್ಪಂದಗಳು, ನಿಬಂಧನೆಗಳು ಮತ್ತು ಷರತ್ತುಗಳ ಎಲ್ಲ ಉಪಬಂಧಗಳಿಗೆ ಒಳಪಟ್ಟಿರತಕ್ಕದ್ದು. ಮತ್ತು ಅವುಗಳಿಗೆ ಅವರು ಬದ್ಧರಾಗಿರತಕ್ಕದ್ದು, ಮತ್ತು ಅವುಗಳನ್ನು ಪಾಲಿಸಲು, ಪರಿವೀಕ್ಷಿಸಲು ಮತ್ತು ಸ್ಥಿರೀಕರಿಸಲು ಹೊಣೆಗಾರರಾಗಿರತಕ್ಕದ್ದು.

2. ವರ್ಗಾವಣೆಗಾರನು, ಅವನು ಪ್ರಸ್ತುತ ವರ್ಗಾವಣೆಯಾಗುತ್ತಿರುವ ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸ್‌ನ್ನು ಅಡಮಾನ ಅಥವಾ ಯಾವುದೇ ಇತರ ರೀತಿಯಲ್ಲಿ ಹಸ್ತಾಂತರಿಸಿಲ್ಲ ಅಥವಾ ವರ್ಗಾಯಿಸಿಲ್ಲ ಎಂದು ಮತ್ತು ಇತರೆ ಯಾರೇ ವ್ಯಕ್ತಿಯು ಪ್ರಸ್ತುತ ವರ್ಗಾಯಿಸುತ್ತಿರುವ ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸ್‌ಗೆ ಸಂಬಂಧಿಸಿದಂತೆ ಯಾವುದೇ ಹಕ್ಕು, ಸ್ವಾಮ್ಯ ಅಥವಾ ಹಿತಾಸಕ್ತಿಯನ್ನು ಹೊಂದಿರುವುದಿಲ್ಲ ಎಂದು ಈ ಮೂಲಕ ಘೋಷಿಸಿದ್ದಾನೆ.

3. ವರ್ಗಾವಣೆಗಾರನು ಮುಂದುವರೆದು:- ಆತನು ಗಣನೀಯ ಪ್ರಮಾಣದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಣಕಾಸು ನೆರವು ಪಡೆದಿರುವುದಿಲ್ಲ ಅಥವಾ ಪಡೆಯುತ್ತಿಲ್ಲ ಮತ್ತು ಇದರ ಮೂಲಕ ಅಥವಾ ಇದರಿಂದಾಗಿ ವರ್ಗಾವಣೆಗಾರನ ಕಾರ್ಯಾಚರಣೆಗಳು ಅಥವಾ ಒಪ್ಪಂದಗಳು ವರ್ಗಾವಣೆಗಾರನ ಹೊರತಾದ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯದಿಂದ ಗಣನೀಯವಾಗಿ ನಿಯಂತ್ರಣಕ್ಕೊಳ್ಳಪಟ್ಟಿರಲ್ಲಿಲ್ಲ ಅಥವಾ ನಿಯಂತ್ರಣಕೊಳ್ಳಪಡುತ್ತಿಲ್ಲ ಎಂಬುದಾಗಿ ಯಾವುದೇ ಒಪ್ಪಂದ ಅಥವಾ ಕರಾರು ಪತ್ರ ಅಥವಾ ವಚನ ಬಂಧವನ್ನು ಮಾಡಿಕೊಂಡಿರಲ್ಲಿಲ್ಲ ಅಥವಾ ಮಾಡಿಕೊಂಡಿಲ್ಲ ಎಂದು ಘೋಷಿಸಿದ್ದಾನೆ.

4. ವರ್ಗಾಯಿತನು ಅಂತಹ ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸ್‌ಗೆ ಸಂಬಂಧಿಸಿದಂತೆ ವರ್ಗಾವಣೆಗಾರನು ಹೊಂದಿದಂಥ ಎಲ್ಲಾ ಷರತ್ತುಗಳು ಮತ್ತು ಹೊಣೆಗಾರಿಕೆಗಳನ್ನು ಒಪ್ಪಿರುತ್ತಾನೆ ಎಂದು ಈ ಮೂಲಕ ಘೋಷಿಸಿದ್ದಾನೆ.

5. ವರ್ಗಾಯಿತನು ಮುಂದುವರೆದು:- ಆತನು ಆರ್ಥಿಕವಾಗಿ ಸದೃಢನಾಗಿದ್ದು ಮತ್ತು ಕಲ್ಲು ಗಣಿಗಾರಿಕೆ ಕಾರ್ಯಾಚರಣೆಗಳನ್ನು ನೇರವಾಗಿ ಕೈಗೊಳ್ಳುವುದಾಗಿ ಘೋಷಿಸಿದ್ದಾನೆ.

6. ವರ್ಗಾಯಿತನು ಮುಂದುವರೆದು:- ಆತನು ತಹಲ್‌ವರೆಗಿನ ಆದಾಯ ತೆರಿಗೆ ವಿವರಪಟ್ಟಿಕೆಗಳನ್ನು ಸಲ್ಲಿಸಿದ್ದಾನೆಂದು, ನಿರ್ಧರಿಸಿದ ಆದಾಯ ತೆರಿಗೆಯನ್ನು ಪಾವತಿ ಮಾಡಿದ್ದಾನೆಂದು ಮತ್ತು ಆದಾಯ ತೆರಿಗೆ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ 43) ರಲ್ಲಿ ಉಪಬಂಧಿಸಿದಂತೆ ಸ್ವಯಂ ನಿರ್ಧರಣೆ ಆಧಾರದ ಮೇಲೆ ಆತನಿಗೆ ಸಂಬಂಧಿಸಿದ ಎಲ್ಲಾ ಆದಾಯ ತೆರಿಗೆಗಳನ್ನು ಪಾವತಿ ಮಾಡಿದ್ದಾನೆಂದು ಘೋಷಿಸಿದ್ದಾನೆ.

7. ವರ್ಗಾವಣೆಗಾರನು ಈ ಲೈಸೆನ್ಸ್‌ಗೆ ಸಂಬಂಧಿಸಿಂತೆ ಈ ದಿನಾಂಕದಂದು ಇದ್ದಂತೆ ಸರ್ಕಾರಕ್ಕೆ ಬರಬೇಕಾದ ವಾರ್ಷಿಕ ನಿಯಂತ್ರಣ ಶುಲ್ಕ ಮತ್ತು ಇತರೆ ಬಾಕಿಗಳನ್ನು ಪಾವತಿ ಮಾಡಿದ್ದಾನೆ.

ಮೇಲೆ ಮೊದಲು ಉಲ್ಲೇಖಿಸಲಾದ ದಿನಾಂಕ ಮತ್ತು ವರ್ಷದಂದು ಪಕ್ಷಕಾರರುಗಳ ಸಮ್ಮುಖದಲ್ಲಿ ಇದಕ್ಕೆ ಸಾಕ್ಷಿದಾರರು ಸಹಿ ಮಾಡಿರುತ್ತಾರೆ.

## ಅನುಸೂಚಿ

________ಗ್ರಾಮದಲ್ಲಿ ಇರುವ_____ತಾಲ್ಲೂಕಿನ _____ಜಿಲ್ಲೆಯ _____ ಜಮೀನು ಸರ್ವೆ ಸಂಖ್ಯೆಯನ್ನು ಹೊಂದಿರುವ ______ಎಕರೆ ವಿಸ್ತೀರ್ಣದ ಮತ್ತು ನಕ್ಷೆಯಲ್ಲಿ ಅದರ ಬಗ್ಗೆ ನಕ್ಷೆ ಚಿತ್ರಣ ರಚಿಸಿದ ಜಮೀನುಗಳ ಎಲ್ಲ ಭೂ ಭಾಗಗಳನ್ನು ಇದಕ್ಕೆ ಅನುಬಂಧಿಸಲಾಗಿದೆ.

ಮತ್ತು ಅದರ ಮೇಲೆ______ಬಣ್ಣದಿಂದ ಗುರುತು ಮಾಡಲಾಗಿದೆ ಹಾಗೂ ಈ ಕೆಳಗಿನ ನಿರ್ದೇಶಾಂಕಗಳೊಂದಿಗೆ ಈ ಕೆಳಕಂಡಂತೆ ಸರಹದ್ದುಗಳನ್ನು ಒಳಗೊಂಡಿದೆ.

ಉತ್ತರಕ್ಕೆ: ಸರ್ವೆ ಸಂಖ್ಯೆಯ ಭಾಗ:
ದಕ್ಷಿಣಕ್ಕೆ: ಸರ್ವೆ ಸಂಖ್ಯೆಯ ಭಾಗ:
ದಕ್ಷಿಣಕ್ಕೆ: ಸರ್ವೆ ಸಂಖ್ಯೆಯ ಭಾಗ:
ದಕ್ಷಿಣಕ್ಕೆ: ಸರ್ವೆ ಸಂಖ್ಯೆಯ ಭಾಗ:

**ನಿರ್ದೇಶಾಂಕಗಳು**

| ಬಿಂದುಗಳು | ರೇಖಾಂಶ | ಅಕ್ಷಾಂಶ |
|---|---|---|
| | | |
| | | |
| | | |
| | | |

ಸಹಿ
ರಾಜ್ಯ ಸರ್ಕಾರಕ್ಕಾಗಿ ಮತ್ತು ಅದರ ಪರವಾಗಿ.
ವರ್ಗಾವಣೆಗಾರನ ಹೆಸರು:
( )
ಸಾಕ್ಷಿಗಳು
1.
2.

ವರ್ಗಾಯಿತನ ಹೆಸರು:"

( )

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಶಿವಪ್ರಕಾಶ)**
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ).

*************

The above transalation of the Karnataka Regulation of Stone Crushers (Amendment) Rules, 2021 shall be authoritative text in the Kannada language under subsection (2) of section 5A of the Karnataka Official Language Act, 1963 (Karnataka Act 26 of 1963).

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಶಿವಪ್ರಕಾಶ)**
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ).

**PR-191**